4343 (3813) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳು ವಿದ್ಯುತ್ ಹಾಗೂ ನೀರಿನ ಬಾಕಿ ಬಡ್ಡಿ ಹಣ ನೀಡದೇ ಇರುವುದರಿಂದ ವಿದ್ಯುತ್ ಹಾಗೂ ನೀರಿನ ಸಂಪರ್ಕಗಳನ್ನು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೊಳಚೆ ನಿವಾಸಿಗಳು ಕೇವಲ ವಿದ್ಯುತ್ ಮತ್ತು ನೀರಿನ ಬಾಕಿ ಹಣ ಪಾವತಿಸುವ ವ್ಯವಸ್ಥೆ ಹಾಗೂ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳುತ್ತದೆಯೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಜಲಮಂಡಳಿಯ ಕಾಯ್ದೆ ಮತ್ತು ನಿಯಮಗಳನುಸಾರ ನೀರಿನ ಶುಲ್ಕವನ್ನು ಬಿಲ್ಲು ತಲುಪಿದ 15 ದಿವಸಗಳೊಳಗೆ ಪಾವತಿ ಮಾಡದಿದ್ದ ಪಕ್ಷದಲ್ಲಿ ಅಂತಹ ನೀರಿನ ಬಾಕಿ ಪಾವತಿಸಿದ ಹಣದ ಮೇಲೆ ಬಡ್ಡಿ ವಿಧಿಸಲಾಗುತ್ತಿದೆ. ಆದರೆ ಕೊಳಚೆ ಪ್ರದೇಶದ ನಿವಾಸಿಗಳಿಗೆ ಹೊರೆಯಾಗದಂತೆ ಜಲಮಂಡಳಿ ನೀರಿನ ಬಾಕಿ ಹಣ ಪಾವತಿಸಲು ಸುಲಭ ಕಂತುಗಳ ಸೌಲಭ್ಯ ಒದಗಿಸಿರುತ್ತದೆ.

ಕರ್ನಾಟಕ ವಿದ್ಯುತ್ ನಿಯಂತ್ರಣದ ಆಯೋಗದ ಆದೇಶದ ಪ್ರಕಾರ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ, ನಿಗದಿತ ಮಿತಿಯಲ್ಲಿ ವಿದ್ಯುತ್ ಬಳಸುವ ಭಾಗ್ಯಜ್ಯೋತಿ/ಕುಟೀರಜ್ಯೋತಿ ಗ್ರಾಹಕರನ್ನು ಹೊರತುಪಡಿಸಿ ಉಳಿದ ಎಲ್ಲಾ ಗ್ರಾಹಕರು ತಾವು ಬಳಸಿದ ವಿದ್ಯುತ್ ಬಿಲ್ಲುಗಳನ್ನು ಪಾವತಿಸಬೇಕು ಹಾಗೂ ವಿಳಂಬವಾಗಿ ಪಾವತಿಸಿದ ಬಿಲ್ಲುಗಳಿಗೆ ಬಡ್ಡಿಯನ್ನೂ ಸಹ ಪಾವತಿಸಬೇಕು. ವಿದ್ಯುತ್ ಬಿಲ್ಲನ್ನು ಪಾವತಿಸಿದ ಗ್ರಾಹಕರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕು.

ಆ) ಬೆಂಗಳೂರು ಜಲಮಂಡಳಿಯಿಂದ ನೀರಿನ ಬಿಲ್ಲಿನ ಬಾಕಿ ಹಣ ಪಾವತಿ ಮಾಡುವ ಸಲುವಾಗಿ ಗ್ರಾಹಕರಿಗೆ ಸುಲಭ ಕಂತುಗಳ ಸೌಲಭ್ಯ ನೀಡಲಾಗಿದೆ. ಬಾಕಿ ನೀರಿನ ಬಿಲ್ಲಿನ ಬಡ್ಡಿ ಮತ್ತು ಬಾಕಿ ವಿದ್ಯುತ್ ಬಿಲ್ಲಿನ ಬಡ್ಡಿ ಮನ್ನಾ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.